

ಜಪಾನ್‌ನಲ್ಲಿ ಭಾರತೀಯ ಕಲಾಪ್ರಕಾರಗಳ ಪ್ರದರ್ಶನ ಕಾರ್ಯಕ್ರಮ ನಡೆಯಿತು. ಅಲ್ಲಿ ಕಬ್ಕಿ ಎಂಬ ನೃತ್ಯ ಪ್ರಕಾರವು ಯಕ್ಷಗಾನದಂತೆಯೇ ಇದೆ. ಅದಕ್ಕೆ ಬಳಸುವ ವೇಷಭೂಷಣಗಳು ಹೀಗೆಯೇ ಇವೆ. ಹಿಮ್ಮೇಳಕ್ಕೆ ಚೆಂಡೆಮದ್ದಳೆ ಮಾದರಿಯ ವಾದ್ಯಗಳಿವೆ. ಅವರ ಹಿಮ್ಮೇಳಕ್ಕೆ ನಮ್ಮ ನೃತ್ಯದ ಹೆಜ್ಜೆಗಳು ಹೊಂದಿಕೆಯಾಗುತ್ತದೆಯೇ, ನಮ್ಮ ಹಿಮ್ಮೇಳಕ್ಕೆ ಅವರ ಹೆಜ್ಜೆಗಳು ಹೊಂದಿಕೆಯಾಗುತ್ತದೆಯೇ ಎಂದು ಪರಿಶೀಲಿಸಿದರೆ, ಅವೆಲ್ಲವೂ ಒಂದಕ್ಕೊಂದು ಕೂಡಿಕೊಳ್ಳುತ್ತಿದೆ ಎಂದು ಗೊತ್ತಾಗಿ ಅಚ್ಚರಿಯಾಯಿತು. ಅಲ್ಲಿ ಹೆಂಗಸರೂ ವೇಷ ಮಾಡುತ್ತಾರೆ. ಅಷ್ಟು ದೂರ ಹೋಗುವುದೇಕೆ, ಇಲ್ಲಿಯೇ ಯಕ್ಷಗಾನದಲ್ಲಿ ತೆಂಕು ತಿಟ್ಟು, ಬಡಗು ತಿಟ್ಟು ಎಂದು ಭೇದಭಾವಗಳನ್ನು ಹೇಳುತ್ತಾರೆ. ನನಗೋ ಹೀಗೆ ತಿಟ್ಟುಗಳೆಂದು ಭೇದ ಮಾಡುವುದು ಸರಿಯಲ್ಲ ಎಂದು ಅನಿಸಿದೆ. ಉತ್ತರ ಕನ್ನಡ ಭಾಗದ ಹಿರಿಯ ಕಲಾವಿದರಾದ ಕರ್ಕಿ ಪರಮಯ್ಯ ಹಾಸ್ಯಗಾರ, ಶಿವರಾಮ ಹೆಗಡೆಯವರ ವೇಷ ನೋಡಿದರೆ, ಮೂರೂರು ದೇವರ ಹೆಗ್ಗಡೆ ಅವರ ವೇಷಗಳನ್ನು ನೋಡಿದರೆ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಬೇಕು ಅನಿಸುವುದಿಲ್ಲ.

**◆ ನಿಮ್ಮ ಪತ್ನಿ ಸಾವಿತ್ರಿಯವರ ಬಗ್ಗೆ ಹೇಳಿ.**

1966ರಲ್ಲಿ ನಾನು ಆಕೆಯನ್ನು ಮದುವೆಯಾದೆ. ನಾನು ಸೂರಿಕುಮೇರಿನಲ್ಲಿ ಸ್ವಂತ ಜಾಗ ಖರೀದಿಸಿ ನೆಲೆನಿಂತವನು. ಮನೆಯನ್ನು ಕಟ್ಟಿ ಭದ್ರಗೊಳಿಸುವುದು ಸುಲಭದ ಕೆಲಸವಲ್ಲ. ನಾನು ಆದಾಯವನ್ನು ಸಂಪಾದಿಸಿದರೂ ಆಕೆ ಅದನ್ನು ನಿಭಾಯಿಸಿದಳು. ‘ಮೇಳಕ್ಕೆ ಹೊರಡುತ್ತೇನೆ’ ಎಂದರೆ ಬೇಡವೆಂದು ಹೇಳುತ್ತಿದ್ದಳು. ಆದರೆ ಆಟಗಳನ್ನು ನೋಡುವ ಆಸಕ್ತಿ ಅವಳಿಗಿತ್ತು. ಅನಂತರ ನಾನು ತೀರ್ಥಹಳ್ಳಿಯ ಸಫಲಪುರ ಎಂಬಲ್ಲಿ ಮನೆ ಮಾಡಿದೆ. ಅಲ್ಲಿಯೂ ಆಕೆ ನಾನಿಲ್ಲದ ವೇಳೆಯಲ್ಲಿ ಎಲ್ಲ ಕೃಷಿ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದಳು. ಮಕ್ಕಳನ್ನು ಬೆಳೆಸಿದಳು. ಆಟ-ಕೂಟವೆಂದು ನಾನು ವರ್ಷದ 365 ದಿನವೂ ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗುತ್ತಿದ್ದೆ. ಕಷ್ಟವೆಂಬುದು ಆಕೆಯ ಬೆನ್ನುಬಿಡಲಿಲ್ಲ. ಒಮ್ಮೆ ನಾವುಳಿದುಕೊಂಡಿದ್ದ ಮನೆಯೇ ಸುಟ್ಟು ಹೋದಾಗ ಬರಿಗೈಯಲ್ಲಿ ನಿಲ್ಲಬೇಕಾಯಿತು. ಮತ್ತೆ ಮೊದಲಿಂದ ಬದುಕು ಕಟ್ಟಿಕೊಳ್ಳಬೇಕಾಯಿತು. ಹೀಗೆ ಎಲ್ಲ ಕಷ್ಟಗಳನ್ನು ದಾಟಿ ಅವಳು ಅಗಲಿಹೋದಳು.

●